**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 3639 /2023 ಸಿ.ಡಬ್ಲೂ.11 ಪಿ.ಡಬ್ಲೂ.5

| | |
|---|---|
| ಹೆಸರು | ತಿರುಮಲೇಶ |
| ತಂದೆ/ಗಂಡ | ನರಸಿಂಹ |
| ವಯಸ್ಸು | 37 ವರ್ಷ |
| ಉದ್ಯೋಗ | ಪಿ ಎಸ ಐ |
| ವಾಸಸ್ಥಳ | ವಾಡಿ |

ದಿನಾಂಕ 05-02-2026
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು ದಿಃ 20-01-2022 ರಿಂದ ದಿಃ 30-07-2023 ರವರೆಗೆ ಆಳಂದ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 10-09-2022 ರಂದು ಮ.12.30 ಗಂಟೆಗೆ ಚಾಸ-1ರವರು ಠಾಣೆಗೆ ಹಾಜರಾಗಿ ಸಲ್ಲಿಸಿದ ಲಿಖಿತ ದೂರಿನ ಆಧಾರದ ಮೇಲೆ ಗುನ್ನ ಸಂಖ್ಯೆ 121/2022 ಅಂತಾ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟು ಅದೇ ದಿನ ಮ. 3.30 ರಿಂದ 4.30 ರವರೆಗೆ ಗುನ್ನ ಸ್ಥಳದ ಪಂಚನಾಮೆಯನ್ನು ಚಾಸ-2 ಮತ್ತು 3 ರವರ ಸಮಕ್ಷಮ ಜರುಗಿಸಿರುತ್ತೇನೆ. ಅದೇ ದಿನ ಚಾಸ-6 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ನಮಗೆ ಆರೋಪಿತರು ಖಜೂರಿ ಗಡಿಯಲ್ಲಿ ಇರುವ ಬಗ್ಗೆ ಬಾತ್ಮಿ ಬಂದ ಕಾರಣ ಸ್ಥಳಕ್ಕೆ ಹೋಗಿ ಅವರಿಗೆ ಕಲಂ 41 ಎ ಅಡಿಯಲ್ಲಿ ನೋಟಿಸ್ ನೀಡಿದರು ಸಹಿತ ಅವರು ಠಾಣೆಗೆ ಬಾರದ ಕಾರಣ ಅವರನ್ನು ವಶಕ್ಕೆ ಪಡೆದು ಸ್ವ ಖುಷಿ ಹೇಳಿಕೆ ಪಡೆದುಕೊಂಡು ಕೃತ್ಯಕ್ಕೆ ಬಳಸಿದ ಮು.ಮಾಲನ್ನು ವಶಪಡಿಸಿಕೊಳ್ಳಲು ಅವರ ತೋರಿಸಿದ ಸ್ಥಳದಲ್ಲಿ 06.00 ಗಂಟೆಯಿಂದ 07.00 ಗಂಟೆಯವರೆಗ ಚಾಸ-4 ಮತ್ತು 5ರವರ ಸಮಕ್ಷಮ ಜಪ್ತಿಪಂಚನಾಮೆಯನ್ನು ಮಾಡಿ 1 ಕಂಟ್ರಿ ಪಿಸ್ತೂಲ್‌ನ್ನು ಜಪ್ತಿಪಡಿಸಿಕೊಂಡಿರುತ್ತೇನೆ. ಅದೇ ದಿನ ನ್ಯಾಯಲಯಕ್ಕೆ ಪಿ ಎಫ್ ಸಲ್ಲಿಸಿರುತ್ತೇನೆ ಆರೋಪಿತರನ್ನು ದಸ್ತಗಿರ ಮಾಡಿ ನಿಯಾಮವಳಿ ಪಾಲಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿರುತ್ತೇನೆ. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ. ದಿಃ 13.09.2022 ರಂದು ಎಫ್ ಎಸ್ ಎಲ್ ಪರೀಕ್ಷೆಗಾಗಿ ನಮ್ಮ ಸಿಬ್ಬಂದಿ ಸುಧೀರ್ ಅವರ ಮುಖಾಂತರ ಸದರಿ ಪಿಸ್ತೂಲ್‌ನ್ನ ಕಳುಹಿಸಿಕೊಟ್ಟಿರುತ್ತೇನೆ. ದಿಃ 24.12.2022 ರಂದು ಎಫ್ ಎಸ್ ಎಲ್ ವರದಿ ಸ್ವಿಕರಿಸಿರುತ್ತೇನೆ. ಅದೇ ದಿನ ಜಿಲ್ಲಾ ಅಧಿಕಾರಿಗಳಿಗೆ ಬೌತೀಕ ಪರೀಕ್ಷೆಗೆ

ಅನುಮತಿ ಕೋರಿ ಪತ್ರ ಬರೆದಿರುತ್ತೇನೆ. ದಿಃ 20.03.2023 ರಂದು ಜಿಲ್ಲಾ ಅಧಿಕಾರಿಗಳ ಮುಂದೆ ಬೌತಿಕ ಪರೀಕ್ಷೆಗಾಗಿ ಸದರಿ ಪಿಸ್ತೂಲ್‌ನ್ನು ಹಾಜರುಪಡಿಸಿರುತ್ತೇನೆ. ದಿಃ 19.04.2023 ರಂದು ಜಿಲ್ಲಾ ಅಧಿಕಾರಿಗಳಿಂದ ಅಂತಿಮ ವರದಿಯನ್ನು ಸಲ್ಲಿಸಲು ಪರವಾನಿಗೆ ಪಡೆದುಕೊಂಡು ಅದೇ ದಿನ ನ್ಯಾಯಾಲಯಕ್ಕೆ ಆರೋಪಿತರ ವಿರುದ್ಧ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-4ಎ, ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-1ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಎಫ್ ಎಸ್ ಎಲ್ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು 5(ಎ) ಎಂದು ಗುರುತಿಸಲಾಯಿತು. ಜಿಲ್ಲಾ ಅಧಿಕಾರಿ ಅವರ ನಡವಳಿಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು 6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಈಗ 1 ಕಂಟ್ರಿ ಪಿಸ್ತೂಲ್ ಮತ್ತು 2 ಕಾಡತುಸುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು. ಮಾ-1 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ **ಶ್ರೀ. ಎಸ್ ಬಿ ಪಿ** ವಕೀಲರಿಂದ:</u>

ನನಗೆ ದೂರನ್ನು ದಿಃ 10.09.2022 ರಂದು ಮ. 12.30 ಗಂಟೆಗೆ ಸಲ್ಲಿಸಿರುತ್ತಾರೆ ಎಂದು ನಮೂದು ಮಾಡಿದ್ದು ನಿಜ ಇರುತ್ತದೆ. ನಾನು ಪ್ರ.ವ.ವರದಿಯನ್ನು 12.30 ಗಂಟೆಗೆ ದಾಖಲಿಸಿರುತ್ತೇನೆ. ನಾನು ಅದೇ ದಿನ ಮ.1.30 ಗಂಟೆಗೆ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಪಂಚನಾಮೆಯನ್ನು 3.30 ರಿಂದ 4.30 ಗಂಟೆಯವರೆಗೆ ಮಾಡಿರುತ್ತೇನೆ. ಗುನ್ನ ಸ್ಥಳವನ್ನು ಚಾಸ-1ರವರು ತೋರಸಿರುತ್ತಾರೆ. ಪಂಚರನ್ನು ನಾನೇ ಕರೆಸಿರುತ್ತೇನೆ. ಸದರಿಯವರನ್ನೆ ಕರೆಸಬೇಕು ಎಂದು ನಾನು ಹೇಳಿರಲಿಲ್ಲ. ಪಂಚರು ನಾನು ಕರೆಯುವ ಸಂದರ್ಭದಲ್ಲಿ ಬಸ್ ನಿಲ್ದಾಣದಲ್ಲಿ ಇದ್ದರು. ನಾನು ಮು.ಮಾ. 1 ನ್ನು ಇಟ್ಟಿದ್ದ ಸೂಟ್ ಕೇಸನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ. ಪಂಚನಾವೆುಯನ್ನು ಸ್ಥಳದಲ್ಲೆ ತಯಾರಿಸಿರುತ್ತೇನೆ. ಕೇವಲ 3.30 ರಿಂದ 04.00 ಗಂಟೆಯ ಒಳಗೆ ಮು.ಮಾಲನ್ನು ಹುಡುಕಿ ಪಂಚರನ್ನು ಕರೆಯಿಸಿ ಪಂಚನಾಮೆ ಮಾಡಿ ವರದಿಯನ್ನು ತಯಾರಿಸುವುದು ಸಾದ್ಯವಾಗುವುದಿಲ್ಲ ಎಂದರೆ ಸರಿಯಲ್ಲ. ಯಾರು ದೂರನ್ನು ಸಲ್ಲಿಸದೆ ಇದ್ದರು ಸಹ ಠಾಣಾ ಅಂಕೆ ಸಂಖ್ಯೆ ಹೆಚ್ಚಿ ಸಲು ಸುಳ್ಳು ದೂರನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಯಾವುದೇ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಮು.ಮಾಲಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ದಿಃ 10-09-2022 ರಂದು ಮ.12.30 ಗಂಟೆಗೆ ಚಾಸ-1ರವರು ಠಾಣೆಗೆ ಹಾಜರಾಗಿ ಸಲ್ಲಿಸಿದ ಲಿಖಿತ

ದೂರಿನ ಆಧಾರದ ಮೇಲೆ ಗುನ್ನ ಸಂಖ್ಯೆ 121/2022 ಅಂತಾ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟು ಅದೇ ದಿನ ಮ. 3.30 ರಿಂದ 4.30 ರವರೆಗೆ ಗುನ್ನ ಸ್ಥಳದ ಪಂಚನಾಮೆಯನ್ನು ಚಾಸ-2 ಮತ್ತು 3 ರವರ ಸಮಕ್ಷಮ ಜರುಗಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಚಾಸ-6 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ನಮಗೆ ಆರೋಪಿತರು ಖಜೂರಿ ಗಡಿಯಲ್ಲಿ ಇರುವ ಬಗ್ಗೆ ಬಾತ್ಮಿ ಬಂದ ಕಾರಣ ಸ್ಥಳಕ್ಕೆ ಹೋಗಿ ಅವರಿಗೆ ಕಲಂ 41 ಎ ಅಡಿಯಲ್ಲಿ ನೋಟಿಸ್ ನೀಡಿದರು ಸಹಿತ ಅವರು ಠಾಣೆಗೆ ಬಾರದ ಕಾರಣ ಅವರನ್ನು ವಶಕ್ಕೆ ಪಡೆದು ಸ್ವ ಖುಷಿ ಹೇಳಿಕೆ ಪಡೆದುಕೊಂಡು ಕೃತ್ಯಕ್ಕೆ ಬಳಸಿದ ಮು.ಮಾಲನ್ನು ವಶಪಡಿಸಿಕೊಳ್ಳಲು ಅವರ ತೋರಿಸಿದ ಸ್ಥಳದಲ್ಲಿ 06.00 ಗಂಟೆಯಿಂದ 07.00 ಗಂಟೆಯವರೆಗ ಚಾಸ-4 ಮತ್ತು 5ರವರ ಸಮಕ್ಷಮ ಜಪ್ತಿಪಂಚನಾಮೆಯನ್ನು ಮಾಡಿ 1 ಕಂಟ್ರಿ ಪಿಸ್ತೂಲ್‌ನ್ನು ಜಪ್ತಿಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ನ್ಯಾಯಲಯಕ್ಕೆ ಪಿ ಎಫ್ ಸಲ್ಲಿಸಿರುತ್ತೇನೆ ಆರೋಪಿತರನ್ನು ದಸ್ತಗಿರ ಮಾಡಿ ನಿಯಾಮವಳಿ ಪಾಲಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿರುತ್ತೇನೆ. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 13.09.2022 ರಂದು ಎಫ್ ಎಸ್ ಎಲ್ ಪರೀಕ್ಷೆಗಾಗಿ ನಮ್ಮ ಸಿಬ್ಬಂದಿ ಸುಧೀರ್ ಅವರ ಮುಖಾಂತರ ಸದರಿ ಪಿಸ್ತೂಲ್‌ನ್ನ ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 24.12.2022 ರಂದು ಎಫ್ ಎಸ್ ಎಲ್ ವರದಿ ಸ್ವಿಕರಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಜಿಲ್ಲಾ ಅಧಿಕಾರಿಗಳಿಗೆ ಬೌತೀಕ ಪರೀಕ್ಷೆಗೆ ಅನುಮತಿ ಕೋರಿ ಪತ್ರ ಬರೆದಿರುತ್ತೇನೆ. ದಿಃ 20.03.2023 ರಂದು ಜಿಲ್ಲಾ ಅಧಿಕಾರಿಗಳ ಮುಂದೆ ಬೌತಿಕ ಪರೀಕ್ಷೆಗಾಗಿ ಸದರಿ ಪಿಸ್ತೂಲ್‌ನ್ನು ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 19.04.2023 ರಂದು ಜಿಲ್ಲಾ ಅಧಿಕಾರಿಗಳಿಂದ ಅಂತಿಮ ವರದಿಯನ್ನು ಸಲ್ಲಿಸಲು ಪರವಾನಿಗೆ ಪಡೆದುಕೊಂಡು ಅದೇ ದಿನ ನ್ಯಾಯಾಲಯಕ್ಕೆ ಆರೋಪಿತರ ವಿರುದ್ಧ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ